

ನಿನ್ನೆ ದಿನ ಹಿನ್ನೀರಿನ ಬಳಿ ಚಿರತೆ ತನ್ನ ಒಂಟಿ ಮರಿಯೊಂದಿಗೆ ಓಡಾಡಿರುವ ವಿಷಯ ಗೊತ್ತಾದ ಮೇಲೆ ನಿಂತಲ್ಲಿ ನಿಲ್ಲಲಾಗದೆ ಒದ್ದಾಡಿದೆ. ಹೇಗಾದರೂ ಮಾಡಿ ತಾಯಿ– ಮಗುವಿನ ಚಿತ್ರ ಒಟ್ಟಿಗೆ ಸೆರೆ ಹಿಡಿಯಬೇಕೆಂಬ ದುರಾಸೆ ಹುಟ್ಟಿಕೊಂಡಿತು. ಕೆಲಸದ ಒತ್ತಡವಿದ್ದ ಕಾರಣ ನಾನು ತಕ್ಷಣಕ್ಕೆ ಹೋಗುವಂತಿರಲಿಲ್ಲ. ಮುಂದಿನ ಎರಡು ದಿನವೂ ಕಾಡಿನ ಪಾಲಕರಿಗೆ ಫೋನು ಮಾಡಿ ಚಿರತೆಯ ಓಡಾಟದ ಮಾಹಿತಿ ಪಡೆಯುತ್ತಲೇ ಇದ್ದೆ. ಚಿರತೆ ಇವತ್ತು ಕಂಡ ಜಾಗದಲ್ಲೇ ನಾಳೆಯೂ ಕಾಣಿಸಿಕೊಳ್ಳುತ್ತದೆ ಎಂದು ನಂಬುವುದು ಮೂರ್ಖತನವಾದೀತು. ಅದು ಗ್ಯಾನ ಬಂದ ಗಿರಾಕಿ. ಎಲ್ಲಿ ಬೇಕಲ್ಲಿ ಲಂಗುಲಗಾಮಿಲ್ಲದೆ ಸುತ್ತುತ್ತದೆ. ಪಕ್ಕಾ ಅಲೆಮಾರಿ. ಹೀಗಾಗಿ ಸುಲಭದಲ್ಲಿ ಚಿರತೆಯನ್ನು ಟ್ರ್ಯಾಕ್ ಮಾಡಲಾಗದು.

ಒಂದೊಮ್ಮೆ ದೊಡ್ಡಗಾತ್ರದ ಪ್ರಾಣಿ ಶಿಕಾರಿ ಮಾಡಿದ್ದರೆ ಮಾತ್ರ ಉಣಿಸಿನ ಸಾಮಾಗ್ರಿ ಖಾಲಿಯಾಗುವ ತನಕ ಇದ್ದಲ್ಲೇ ಠಿಕಾಣಿ ಹೂಡುತ್ತದೆ. ಸಣ್ಣಪುಟ್ಟ ಗಾತ್ರದ ಶಿಕಾರಿ ಸಿಕ್ಕರೆ ಕಡ್ಲೇಪುರಿ ತಿಂದು, ಪೇಪರ್ ಬಿಸುಟು ಹೋದಂತೆ ಜಾಗ ಖಾಲಿ ಮಾಡಿರುತ್ತದೆ. ಚಳಿಗಾಲದಲ್ಲಿ ಇವುಗಳ ಮಿಲನ ಮಹೋತ್ಸವ ನಡೆಯುವಾಗ ಇದರ ಇರುವಿಕೆ ಎಲ್ಲೆಂದು ಕೊಂಚ ಅಂದಾಜಿಸಬಹುದು. ತಿಂದುಂಡು ರೆಸ್ಟ್ ತೆಗೆದುಕೊಳ್ಳುವ ಸಮಯದಲ್ಲಿ ಚಿರತೆ ದಿವಾನ್ ಕಾಟನಂತಹ ಬಾಗಿದ ಹೆಮ್ಮರದ ಕೊಂಬೆಗಳನ್ನು ಬಳಸುತ್ತದೆ. ಹುಲಿಗಳು ಇಲ್ಲೇ ಎಲ್ಲೋ ಸಂಚರಿಸುತ್ತಿವೆ ಎಂದು ಗೊತ್ತಾದರಂತೂ ಹೆದರಿ ಆ ಏರಿಯಾವನ್ನೇ ತೊರೆದು ಓಟ ಕೀಳುತ್ತವೆ.

ನನಗೆ ಹೆಚ್ಚಾಗಿ ಸಂಜೆಯ ಹೊತ್ತು ಅದು ಚೌಡಿಗುಡಿಯ ದಿಕ್ಕಿನ ಕಡೆಗೆ ಬಂದು ಹೋಗುತ್ತಿದೆ ಎಂಬ ಮಾಹಿತಿ ಸಿಕ್ಕಿತ್ತು. ಭದ್ರಾ ಜಲಾಶಯದ ನೀರಿಗೆ ಆತುಕೊಂಡಿರುವ ಕಲ್ಲಾಕೃತಿಯೇ ಚೌಡಿಗುಡಿ. ಅರಣ್ಯ ಇಲಾಖೆಯವರು ದಸರಾ ಹಬ್ಬದ ಟೈಮಿನಲ್ಲಿ ಇಲ್ಲಿ ಹರಕೆ ಸಲ್ಲಿಸುತ್ತಾರೆ. ನಾವು ಭದ್ರಾ ಕಾಡಿಗೆ ಹೋದಾಗೆಲ್ಲಾ ಇತ್ತ ಕಡೆಗೊಮ್ಮೆ ಕಣ್ಣು ಹಾಯಿಸುತ್ತೇವೆ. ಇದಕ್ಕೆ ಕಾರಣ ಇಲ್ಲಿ